ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Construction of C.C Road at ... ಪುಟದ ಸಂಖ್ಯೆ —1—

Harohalli village in chowdeshwari ... ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	Ward No-02 ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ: Construction of CC road at Harohalli village in chowdeshwari ward no-02 of yelahanka Sub division.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ಯಲಹಂಕ ವಲಯ ವ್ಯಾಪ್ತಿಗೆ ಒಳಪಡುವ ಚೌಡೇಶ್ವರಿ ವಾರ್ಡ್ ನಂ–02ರಲ್ಲಿನ ಹಾರೋಹಳ್ಳಿ ಗ್ರಾಮದಲ್ಲಿರುವ ಮುಖ್ಯ ಮತ್ತು ಅಡ್ಡರಸ್ತೆಗಳಿಗೆ ಆರ್.ಸಿ.ಸಿ. ಚರಂಡಿ ಮತ್ತು ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿಕೊಡಬೇಕೆಂದು ಸ್ಥಳೀಯ ಸಾರ್ವಜನಿಕರು ಮಾನ್ಯ ಶಾಸಕರು ಯಲಹಂಕ ವಿಧಾನ ಸಭಾ ಕ್ಷೇತ್ರ ರವರಿಗೆ ಮನವಿ ಸಲ್ಲಿಸಿರುತ್ತಾರೆ. ಅದರಂತೆ ಈ ಮೇಲ್ಕಂಡ ಕಾಮಗಾರಿಯನ್ನು 2022–23ನೇ ಸಾಲಿನ ಆಯವ್ಯಯದ ಲೆಕ್ಕಶಿರ್ಷಿಕೆ ಪಿ–3726ರಡಿಯಲ್ಲಿ ಕೈಗೊಂಡು ನಿರ್ವಹಿಸುವಂತೆ ಮಾನ್ಯ ಶಾಸಕರು ಯಲಹಂಕ ವಿಧಾನ ಸಭಾ ಕ್ಷೇತ್ರರವರು ಮತ್ತು ಮೇಲಾಧಿಕಾರಿಗಳು ಸೂಚಿಸಿರುತ್ತಾರೆ.

ಅದರಂತೆ ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2022–23ನೇ ಸಾಲಿನ ಆಯವ್ಯಯದ ಲೆಕ್ಕಶಿರ್ಷಿಕೆ ಪಿ–3726 ರಡಿಯಲ್ಲಿ **ರೂ.25.00ಲಕ್ಷಗಳಿಗೆ** ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆಯಲ್ಲಿ ಮಂಜೂರಾಗಿರುವ ದರಪಟ್ಟಿಯಂತೆ ಮತ್ತು ದಿನಾಂಕ:07–07–2022ರ ಪರಿಷ್ಕೃತ ದರಗಳನ್ನು ಆಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

1. ಆರ್.ಸಿ.ಸಿ. ಚರಂಡಿ ನಿರ್ಮಾಣ ಮಾಡಲು ಮಣ್ಣು ಅಗೆತ ಕೆಲಸ ಮಾಡುವುದು ಹಾಗೂ ತೆಗೆದ ಮಣ್ಣನ್ನು ದೂರದ ಸ್ಥಳಕ್ಕೆ ಸಾಗಿಸುವುದು.
2. ಆರ್.ಸಿ.ಸಿ. ಚರಂಡಿ ತಳಭಾಗಕ್ಕೆ 1:4:8 ಮಿಶ್ರಣದ ಕಾಂಕ್ರೀಟ್ ಹಾಕುವುದು
3. ಆರ್.ಸಿ.ಸಿ. ಚರಂಡಿ ನಿರ್ಮಾಣಕ್ಕೆ ಎಂ–20 ಮಿಶ್ರಣದ ಕಾಂಕ್ರೀಟ್ ಹಾಕುವುದು
4. ಆರ್.ಸಿ.ಸಿ. ಪ್ರೀ ಕ್ಯಾಸ್ಟ್ ಕವರಿಂಗ್ ಸ್ಲ್ಯಾಬ್‌ಗಳನ್ನು ಆಳವಡಿಸುವುದು.
5. ಅವಶ್ಯ ವಿರುವ ಕಡೆ ಕಲ್ವರ್ಟ್‌ಗಳನ್ನು ನಿರ್ಮಾಣ ಮಾಡುವುದು
6. ಕಿರಿದಾದ ರಸ್ತೆಗಳಿಗೆ ಕಾಂಕ್ರೀಟ್ ಹಾಕವುದು ಇತ್ಯಾಧಿ.

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಅದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ 2022–23ನೇ ಸಾಲಿನಲ್ಲಿ ವಿಶೇಷ ಅಭಿವೃದ್ದಿ ಕಾರ್ಯಕ್ರಮದ ಅನುದಾನದಡಿ ಪಿ–3726 ರಡಿಯಲ್ಲಿ _____ ರಂತೆ ಜಾಬ್ ಕೋಡ್ ದೊರೆತಿದ್ದು, ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಈ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಅ (ವಾರ್ಡ್–ನಂ02)

Asst. Executive Engineer
Yelahanka Sub. Divison
(BBMP-Ph(ಯಲಹಂಕ ಉ.ವಿ)
Yelahanka, Bangalore

ಪುಟದ ಸಂಖ್ಯೆ .....

ವಿಷಯ :

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಕಂಡಿಕೆ (01)ರಿಂದ(04)ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2022–23ನೇ ಸಾಲಿನ ವಾರ್ಷಿಕ ಆಯವ್ಯಯ ಕಾರ್ಯಕ್ರಮದ ಅನುದಾನದಡಿಯಲ್ಲಿ ಮಂಜೂರಾಗಿರುವ Construction of CC road at Harohalli village in chowdeshwari ward no-02 of yelahanka Sub division. ಎಂಬ ಕಾಮಗಾರಿಯನ್ನು ಕೈಗೊಳ್ಳಲು 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಎಸ್.ಆರ್. ದರಪಟ್ಟಿ, ಹಾಗೂ ದಿನಾಂಕ:07–07–2022ರ Issued rates ಅನುಸರಿಸಿ ರೂ.25.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1) ಪಿ.ಆರ್/394/2021–22 ದಿನಾಂಕ:18–01–2022ರಂತೆ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನುಮೋದನೆ ನೀಡಲು ತಮ್ಮ ಮುಂದಿನ ಆದೇಶ ಕೋರಿ ಸಲ್ಲಿಸಿದೆ. ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ
(5)	ಮುಖ್ಯ ಅಭಿಯಂತರರು (ಯ.ವ) ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, 2022–23ನೇ ಸಾಲಿನ ಅನುದಾನದಡಿಯಲ್ಲಿ Construction of CC road at Harohalli village in Chowdeshwari ward no-02 Yelahanka sub division ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ಎಸ್‌ಆರ್ ದರಪಟ್ಟಿ 2021–22ರಂತೆ ಅಂದಾಜು ಪಟ್ಟಿಯನ್ನು ರೂ.25.00ಲಕ್ಷಗಳಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆ ಡಿಟಿಎಸ್ ಮತ್ತು ತಾಂತ್ರಿಕ ಮಂಜೂರಾತಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.
(6)	ಮಾನ್ಯ ಮುಖ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಆ/ಪಿ.ಆರ್/93/2021–22. ದಿನಾಂಕ:06–07–2021ರ ಆದೇಶದಲ್ಲಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಅನುದಾನಗಳಿಗೆ ಆಯಾ ವಲಯ ಮುಖ್ಯ ಅಭಿಯಂತರರ ಕಛೇರಿಯಲ್ಲಿ ಹಾಗೂ ಸರ್ಕಾರದ ಅನುದಾನಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಅನುಮೋದಿತ ಕ್ರಿಯಾಯೋಜನೆಯಂತೆ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಣೆ ಪೂರ್ಣ ಛಾಯಾಚಿತ್ರಗಳೊಂದಿಗೆ ಅನ್ವಯವಾಗುವ ನಿರ್ವಹಣೆ ಕಾಮಗಾರಿಗಳಿಗೆ ರಸ್ತೆ ಇತಿಹಾಸ. ಆಡಳಿತಾತ್ಮಕ ಅನುಮೋನದೆ ಮತ್ತು ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಪೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.
(7)	ಮುಂದುವರೆದು, ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ: ಬಿ12(1)ಪಿಆರ್/394/2021–22, ದಿನಾಂಕ:18–01–2022ರಲ್ಲಿ ನೀಡಿರುವ ಅಧಿಕಾರದನ್ವಯ ಪ್ರಸ್ತಾಪಿತ ಕಾಮಗಾರಿಗೆ ಪ್ರಕ್ರಿಯ ಕೈಗೊಳ್ಳಲು ಮಾನ್ಯ ಆಡಳಿತಗಾರರು (ಬಿಬಿಎಂಪಿ)ರವರಿಂದ ಆಡಳಿತಾತ್ಮಕ ಅನುಮೋದನೆ ಡಿಟಿಎಸ್ ಮತ್ತು ತಾಂತ್ರಿಕ ಮಂಜೂರಾತಿ ಅನುಮೋದನೆಯನ್ನು ನೀಡಲು ಕೋರಿದ್ದು, ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ. ಮುಖ್ಯ ಅಭಿಯಂತರರು (ಯ.ವ) ಮುಖ್ಯ ಅಭಿಯಂತರರು

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– Construction of CC road at Harohalli village in chowdeshwari ward no-02 of Yelahanka Sub division. ಎಂಬ ಕಾಮಗಾರಿಯ ಟೆಂಡರ್ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ:BBMP/EE/YNK.D/E-PMT/19/2022-23 dated:14-03-2023.

* * * * *

(9) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ 2022–23ನೇ ಸಾಲಿನ ವಾರ್ಷಿಕ ಆಯವ್ಯಯದ ಕಾರ್ಯಕ್ರಮದ ಅನುದಾನದಡಿಯಲ್ಲಿ ವಾರ್ಡ್‌ನಂ–02ರ ವ್ಯಾಪ್ತಿಯ ಹಾರೋಹಳ್ಳಿ ಗ್ರಾಮದಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಮಾಡುವ ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Construction of CC road at Harohalli village in chowdeshwari ward no-02 of Yelahanka Sub division.	25.00
	Total	25.00

(10) ಈ ಮೇಲ್ಕಂಡ ಕಾಮಗಾರಿಗೆ ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಅನುಮೊದನೆ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ ಹಾಗೂ ಪರಿಷ್ಕೃತ ದರಗಳನ್ನು ಅನುಸರಿಸಿ ರೂ.25.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಸಂಖ್ಯೆಬೃ.ಬೆಂ.ಮ.ಪಾ/ಮು.ಅ/ಯ.ವಿ/ತಾ.ಮಂ/79/2022–23 ದಿ: 23/03/2023 ರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಕರಡು ಟೆಂಡರ್ ಶೆಡ್ಯೂಲ್ – ಬಿ ಗೆ ಅನುಮೋದನೆ ನೀಡಿರುತ್ತಾರೆ.

(11) ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 14–03–2023 ರಂದು KTPP.Act and KW-1 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ _____ ದಿನಪತ್ರಿಕೆಯಲ್ಲಿ ದಿನಾಂಕ:16–03–2023 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Construction of CC road at Harohalli village in chowdeshwari ward no-02 of Yelahanka Sub division.
2	ಅಂದಾಜು ಮೊತ್ತ	ರೂ.25.00 ಲಕ್ಷಗಳು
3	ಇಂಡೆಂಟ್ ನಂ	BBMP/2022-23/ OW/WORK INDENT52948/CALL-3
4	ಅನುದಾನದ ಯೋಜನೆ ಹೆಸರು	2022–23ನೇ ಸಾಲಿನ ಆಯವ್ಯಯದ ವಾರ್ಷಿಕ ನಿರ್ವಹಣೆ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

5	ಲೆಕ್ಕಶೀರ್ಷಿಕೆ	ಪಿ–3726
6	ಅಡಳಿತಾತ್ಮಕ ಅನುಮೋದನೆ	ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿರವರಿಂದ ಪಡೆಯಲಾಗಿದೆ.
7	ತಾಂತ್ರಿಕ ಮಂಜೂರಾತಿ ಮೊತ್ತ	ರೂ.25.00 ಲಕ್ಷಗಳು
8	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ.ಬೃ.ಬೆಂ.ಮ.ಪಾ/ಮು.ಅ/ಯವ/ತಾ.ಮಂ/73/2022–ದಿ:13/8/2022ರಂತೆ
9	ಟೆಂಡರ್‌ಗೆ ಇಟ್ಟ ಮೊತ್ತ	ರೂ.21.18ಲಕ್ಷಗಳು
10	ಅನ್ ಲೈನ್ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	23-03-2023 upto 16.00 hrs
11	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್‌ತೆರೆಯುವ ದಿನಾಂಕ	24-03-2023 after 16.00 hrs

(12) ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ:24–03–2023 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1) Sri CHETHAN M (C CONS ENTERPRISES)
2) Sri. AKSHAY KUMAR H B (AKSHAY CONSTRUCTIONS)

(13) ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, ಬಿಡ್ದುದಾರರ ದಾಖಲೆಗಳನ್ನು ಪರಿಶೀಲಿಸಲಾಗಿ, 1) Sri CHETHAN M (C CONS ENTERPRISES) and 2) Sri. AKSHAY KUMAR H B (AKSHAY CONSTRUCTIONS) ಬಿಡ್ದುದಾರರು ನಮೂದಿಸಿರುವ ದರಗಳವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2021–22ನೇ ಸಾಲಿನ ಅನುಮೋದಿತ ದರಗಳಿಗೆ ಹಾಗೂ ಪರಿಷ್ಕೃತ ದರಗಳಿಗೆ ಹೊಲಿಸಿದಾಗ.	ಗುತ್ತಿಗೆ ದಾರರು ನಮೂದಿಸಿರುವ ದರಗಳು	2021–22ನೇ ಸಾಲಿನಧರಗಳಿಗೆ ಹಾಗೂ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ತೇಕಡ ವಾರು	ಪರಾ
01	CHETHAN M (C CONS ENTERPRISES)	2118035.69	1891129.44	(–)10.71% ಕಡಿಮೆ	
	AKSHAY KUMAR H B (AKSHAY CONSTRUCTIONS		2117951.29	ಎಸ್.ಆರ್. ದರ	

(14) ಮೇಲ್ಕಂಡ ಗುತ್ತಿಗೆದಾರರು ಸಲ್ಲಿಸಿರುವ ದಾಖಿಲಾತಿಗಳನ್ನು ಪರಿಶೀಲಿಸಲಾಗಿ Sri CHETHAN M (C CONS ENTERPRISES)ರವರು ಕಡಿಮೆದರಗಳನ್ನು ನಮೂದಿಸಿರುತ್ತಾರೆ. ಆದರೆ ಟೆಂಡರ್ ನೋಟಿಪಿಕೇಷನ್ ಷರತ್ತುಗಳಂತೆ ಸದರಿ ಕಾಮಗಾರಿಗೆ 2ನೇ ದರ್ಜೆ ಗುತ್ತಿಗೆದಾರರ ಪ್ರಮಾಣ ಪತ್ರನ್ನು (Class Two Contractor Registration certificate) ಟೆಂಡರ್ ತೆರೆಯುವ ದಿನಾಂಕದೊಳಗೆ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಆಫ್‌ಲೋಡ್ ಮಾಡಬೇಕಾಗಿತ್ತು. ಆದರೆ ಸದರಿ ಗುತ್ತಿಗೆದಾರರು 2ನೇ ದರ್ಜೆ ಗುತ್ತಿಗೆದಾರರ ಪ್ರಮಾಣ ಪತ್ರನ್ನು ಆಫ್‌ಲೋಡ್ ಮಾಡಲು ವಿಫಲರಾಗಿರುವ ಕಾರಣ ಸದರಿಯವರ ಬಿಡ್ಡನ್ನು ತಿರಸ್ಕರಿಸಲಾಗಿದೆ.

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	ಮುಂದುವರೆದು ಉಳಿದ ಬಿಡ್ದುದಾರರಾದ Sri AKSHAY KUMAR H B (AKSHAY CONSTRUCTIONS) ರವರು ನಮೂದಿಸಿರುವ ದರಗಳಾದ **ರೂ.21,17,951.29** ಗಳನ್ನು2021–22ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ ಹಾಗೂ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಎಸ್.ಆರ್. ದರಗಳಾಗಿರುತ್ತದೆ. ಆದುದರಿಂದ ಸದರಿಯವರ ದರಗಳನ್ನು ಅನುಮೋದಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ. ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ
(15)	ಮುಖ್ಯ ಅಭಿಯಂತರರು (ಯಲಹಂಕ ವಲಯ) ಕಾರ್ಯಪಾಲಕ ಅಭಿಯಂತರರು (ಯಲಹಂಕ)ರವರ ವರದಿಯಂತೆ ಸದರಿ ಕಾಮಗಾರಿಗೆ ದಿನಾಂಕ:16–03–2023ರಂದು ಟೆಂಡರ್ ತೆರಯಲಾಗಿದ್ದು, ತಾಂತ್ರಿಕ ಮೌಲ್ಯ ಮಾಪನದಲ್ಲಿ ಇಬ್ಬರು ಬಿಡ್ದಾರರಾದ 1)Sri.CHETHAN.M, 2)SRI.AKSHAY KUMAR.H.B (AKSHAYA CONSTRUCTIONS)ರವರು ಭಾಗವಹಿಸಿದ್ದು, Sri.CHETHAN.M, ರವರು ಟೆಂಡರ್ ನೋಟಿಪಿಕೇಷನ್ ಷರತ್ತುಗಳಂತೆ ಸದರಿ ಕಾಮಗಾರಿಗೆ 2ನೇ ದರ್ಜೆ ಗುತ್ತಿಗೆದಾರರ ಪ್ರಮಾಣ ಪತ್ರವನ್ನು ಟೆಂಡರ್ ತೆರೆಯುವ ದಿನಾಂಕದೊಳಗೆ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿದ್ದು, ಆದರೆ ಸದರಿ ಗುತ್ತಿಗೆದಾರರು 2ನೇ ದರ್ಜೆ ಪ್ರಮಾಣ ಪತ್ರವನ್ನು ಕಛೇರಿಗೆ ಸಲ್ಲಿಸದ ಕಾರಣ ಸದರಿಯವರ ಬಿಡ್‌ನ್ನು ತಿರಸ್ಕರಿಸಲಾಗಿರುತ್ತದೆಂದು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ತಿಳಿಸಿದ್ದು, ಎಲ್–2 ಗುತ್ತಿಗೆದಾರರ ದಾಖಲಾತಿಗಳು ಸಮರ್ಪಕವಾಗಿದ್ದು, ಅತಿ ಕಡಿಮೆ ದರ ನಮೂದಿಸಿರುವ SRI.AKSHAY KUMAR.H.B (AKSHAYA CONSTRUCTIONS)ರವರು ನಮೂದಿಸಿರುವ ಮೊತ್ತ ರೂ.21,17,951.29ಗಳಾಗಿದ್ದು, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಎಸ್‌ಆರ್ ದರಗಳಾಗಿದ್ದು, ಮಾನ್ಯ ಮುಖ್ಯ ಆಯುಕ್ತರುರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ:ಬಿ12(1)ಪಿಆರ್/394/21–22, ದಿನಾಂಕ:18–01–2022ರಂತೆ ಟೆಂಡರ್ ಅನುಮೋದನೆ ಸಂಬಂಧ ಮುಂದಿನ ಆದೇಶಕ್ಕೆ ಸಲ್ಲಿಸಿದೆ.
(16)	ಮುಖ್ಯ ಅಭಿಯಂತರರು(ಯ.ವ) ಮುಖ್ಯ ಅಭಿಯಂತರರು ಯಲಹಂಕ ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

06

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ವಿಷಯ :

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(17)	2022–23ನೇ ಸಾಲಿನ ವಾರ್ಷಿಕ ಆಯವ್ಯಯದ ಕಾರ್ಯಕ್ರಮದ ಅನುದಾನದ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಯಾದ "Construction of CC road at Harohalli village in chowdeshwari ward no-02 of Yelahanka Sub division." ಎಂಬ ಕಾಮಗಾರಿಗೆ ಟೆಂಡರ್ ಅನುಮೋದನೆ ಕೋರಿ ಮಾನ್ಯ ಮುಖ್ಯ ಅಭಿಯಂತರರು, ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಕಂಡಿಕೆ ( )ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಮೊತ್ತ ರೂ.21,17,951/–ಗಳಿಗೆ ಅನುಮೋದನೆ ನೀಡಿರುತ್ತಾರೆ.
(18)	ಕಂಡಿಕೆ ಮುಂದುವರೆದಂತೆ ಸರ್ಕಾರದ ಆದೇಶ ಸಂಖ್ಯೆ: FD 20 CSL 2022 Dated:15-07-2022 and ಸಂಖ್ಯೆ:ಸಂಖ್ಯೆ:ಆಇ 447 ವೆಚ್ಚ–12/2022 ದಿನಾಂಕ: 30–07–2022 ರಂತೆ ಟೆಂಡರ್ ಮೊತ್ತಕ್ಕೆ ಶೇಕಡ +18% GST Charges Amount Rs.3,81,231/-ಗಳನ್ನು ಸೇರಿಸಿ ಒಟ್ಟು ಮೊತ್ತ ರೂ.24,99,182/–ಗಳಾಗಿದ್ದು ಗುತ್ತಿಗೆದಾರರಾದ. SRI. AKSHAY KUMAR H B, (AKSHAY CONSTRUCTIONS) ರವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆರ್ಥಿಕ ಇಲಾಖೆ ರವರ ಆದೇಶ ಸಂಖ್ಯೆ:ಅಇ/456/ವೆಚ್ಚ/12/2022 ಬೆಂಗಳೂರು ದಿನಾಂಕ: 10–08–2022 ರಿಂದ ಅನ್ವಯವಾಗುವಂತೆ ಭದ್ರತಾ ಠೇವಣಿ (Performance Security) ಮೊತ್ತವನ್ನು ಶೇಕಡ 5% ರಷ್ಟು Rs.1,06,000/- in the form of FD Vide No:493863, Dated:20.10.2023 issued on Karnataka Bank Ltd., Hunsemaranahalli Branch, Bangalore ನೀಡಿರುತ್ತಾರೆ. ಆದುದರಿಂದ ಗುತ್ತಿಗೆದಾರೊಂದಿಗೆ ಕರಾರು ಒಡಂಬಡಿಕೆ ಮಾಡಿಕೊಂಡು ಅನ್‌ಲೈನ್ ಮೂಲಕ ಕಾರ್ಯಾದೇಶ (Work Order) ನೀಡಲಾಗಿದೆ. 20/10/2023 ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ